## ಎತ್ತಬೇಕು



ನಾನು ವಾರಾಂತ್ಯದ ಒತ್ತಡದಲ್ಲಿ ಕೆಲಸ ಮಾಡುತ್ತಿದ್ದೆ. ಓರ್ವ ಗ್ರಾಹಕಿ ನೈಟಿ ತೊಟ್ಟುಕೊಂಡು, ಅದರ ಮೇಲೆ ಮಾಸಲು ಚೆಕ್ಸ್ ಟವೆಲ್ ಹಾಕಿಕೊಂಡು, ಚಿಕ್ಕ ಮಗುವನ್ನು ಎತ್ತಿಕೊಂಡು ನಮ್ಮ ಬ್ಯಾಂಕಿಗೆ ಬಂದಳು. ಅವಳ ಇನ್ನೊಂದು ಕೈಯಲ್ಲಿ ಬ್ಯಾಂಕ್ ಪಾಸ್‌ಬುಕ್ ಇತ್ತು. ನನ್ನೆದುರು ಬಂದವಳೇ, 'ಎತ್ತಬೇಕು' ಅಂದಳು. ನಾನು ತಟ್ಟನೇ ಮಗುವನ್ನು ಎತ್ತಲೆಂದು ನನ್ನ ಕೈಗಳನ್ನು ಮುಂದಕ್ಕೆ ಚಾಚಿದೆ. ಈಗೀಗ ಬ್ಯಾಂಕಿನಲ್ಲಿ ಬೇರೆ ಬೇರೆ ಯೋಜನೆಗಳು ಬಂದಿರುವಂತೆ ಮಗುವನ್ನು ಎತ್ತಿಕೊಳ್ಳುವ ಹೊಸ ಯೋಜನೆ ಏನಾದ್ರೂ ಬಂದಿರಬಹುದೇ ಎಂದು ನಾನು ಯೋಚಿಸಿದೆ. ಅವಳಿಗೆ ನಾಚಿಕೆಯಾಗಿ, ಪಾಸ್‌ಬುಕ್ ಅನ್ನು ನನ್ನ ಕೈಗೆ ಕೊಟ್ಟಳು. ಆಗ ಪಕ್ಕದಲ್ಲಿರುವ ಸಹೋದ್ಯೋಗಿಯೊಬ್ಬರು 'ಎತ್ತಬೇಕು ಅಂದರೆ ಅಕೌಂಟಿನಲ್ಲಿರುವ ದುಡ್ಡನ್ನು ತೆಗೆಯಬೇಕು ಅಂತರ್ಥ' ಎಂದು ವಿವರಿಸಿದರು!

**ಬಿ.ಎನ್. ಭರತ್**

## ತವಾ ಫ್ರೈ



ನಮ್ಮ ಮನೆಯ ಓನರ್ ತಾತ ಕರಾವಳಿ ಭಾಗದವರು. ಪತ್ನಿ ಅಗಲಿದ್ದರು, ಮಕ್ಕಳು ವಿದೇಶದಲ್ಲಿದ್ದರು. ಅವರ ಮನೆಗೆ ಹೋದಾಗೆಲ್ಲ 'ಮೀನು ತಿನ್ನದೇ ಬಾಯಿ ಕೆಟ್ಟಿದೆ' ಅನ್ನೋರು. ಪ್ರತಿಬಾರಿಯೂ ಅನಾರೋಗ್ಯ ಉಂಟಾದಾಗ 'ಮೀನು ತಿನ್ನದೇ ನನ್ನ ಆರೋಗ್ಯ ಹೀಗಾಯ್ತು' ಎಂದೇ ಹೇಳುತ್ತಿದ್ದರು. ಹೋದಾಗಲೆಲ್ಲ ಮೀನಿನ ತವಾ ಫ್ರೈ ಮಾಡುವುದು ಹೇಗೆ? ಮಸಾಲೆ ಹಚ್ಚುವುದು ಹೇಗೆ, ಅದನ್ನು ಮಗುಚಿ ಹಾಕಿ ಬೇಯಿಸಿ ತಟ್ಟೆಗೆ ಹಾಕುವುದು ಹೇಗೆ ಎನ್ನುವುದನ್ನೆಲ್ಲಾ, ರಸಭರಿತವಾಗಿ ಹೇಳುತ್ತಿದ್ದರು. ನಾನು ಒಂದು ದಿನ ಬೆಳಗ್ಗೆ ಮೀನು ತಂದು ಅವರು ಹೇಳಿದಂತೆ ಮಸಾಲ ಹಚ್ಚಿ ತವಾ ಫ್ರೈ ಮಾಡಿ ಕೊಟ್ಟೆ. ಎರಡು ದಿನ ಬಿಟ್ಟು, 'ನೀನು ಮಾಡಿದ ಮೀನಿನ ತವಾ ಫ್ರೈ ತಿಂದು ನನ್ನ ಆರೋಗ್ಯ ಹಾಳಾಯಿತು' ಅನ್ನಬೇಕೆ ತಾತ!

**ಪಲ್ಲವಿ ಬಿ.ಎನ್.**